Reg. No. B G 155

2-8-1969

52nd Year of Publication

SATYAVADI Daily, MYSORE-4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಒರಿಸ್ಸಾದಲ್ಲಿ ಬಸ್ ದರ ಏರಿಕೆಗೆ ಪ್ರತಿಭಟನೆ

ಸೇವಾ ಮಂಡಲಿ

ಮೈಸೂರು ನಗರದ ಜನತೆಯ ನಾನಾ ಸಮಸ್ಯೆಗಳ ಪರಿಹಾರಕ್ಕಾಗಿ ರಾಜಕೀಯದಿಂದ ದೂರವಾದ ಸೇವಾ ಮನೋಭಾವನೆಯನ್ನು ಹೊಂದಿರುವ " ಸೇವಾ ಮಂಡಲಿ " ಸ್ಥಾಪಿತವಾಗಿದೆ. ಡಾ|| ಬಿ. ಜಿ. ದಾಸ್ ರವರು ಈ ಮಂಡಲಿಯ ಅಧ್ಯಕ್ಷರು. ಶ್ರೀ ಎಂ. ಕೆ. ಮುಕುಂದರಾವ್ ಈ ಮಂಡಲಿಯ ಉಪಾಧ್ಯಕ್ಷರು. ಅಡ್ವೊಕೇಟ್ ಶ್ರೀ ಹೆಚ್. ಎಸ್. ಚಂದ್ರಶೇಖರ್ ಈ ಮಂಡಲಿಯ ಕಾರ್ಯದರ್ಶಿಗಳು.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ. ಸಿ. ಮೋದಿಯವರು ಡಾ|| ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಂದು ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ' ಸತ್ಯವಾದಿ '
ಚಾಮರಾಜಪುರಂ, ಮೈಸೂರು 4.

ಶ್ರೀ ಹೊಂಬೇಗೌಡರ ನಿಧನ

ಬೆಂಗಳೂರು— ರಾಜ್ಯದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹೊಂಬೇಗೌಡರವರು ನಿನ್ನೆ ಬೆಳಿಗ್ಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ – ಎಲ್ಲಾ ಕೋರ್ಟುಗಳೂ ಮುಚ್ಚಲ್ಪಟ್ಟಿದ್ದವು,

★

ಶಾಸನಸಭೆಯಲ್ಲಿ ಪೋಲೀಸರ ದಾಂಧಲೆ

ಕಲ್ಕತ್ತಾ— ಬಸಿರತಿಯಲ್ಲಿ ಜನರ ಗುಂಪಿನ ಮೇಲೆ ಗುಂಡು ಹಾರಿಸಿದ್ದ ಸಂದರ್ಭದಲ್ಲಿ ಸತ್ತ ಒಬ್ಬ ಪೋಲೀಸು ಪ್ಯಾಟೆ ಶವನನ್ನು ಕುಪಿತರಾದ ಮೂರು ಸಾವಿರ ಪೋಲೀಸರು ಐತಿಹ್ಯ ಬಂಗಾಳಾ ಶಾಸನ ಸಭೆಗೆ ಹೊತ್ತಿಕೊಂಡು ಬಂದಾಗ ಭವನದ ದಕ್ಷಿಣ ಬಾಗಲಲ್ಲಿ ತಡೆಯಲ್ಪಟ್ಟರು: ನಂತರ ಪ್ರದರ್ಶನಕಾರರು ಸಭಾಭವನಕ್ಕೆ ನುಗ್ಗಿ ಸಿಕ್ಕಿದ್ದನ್ನೆಲ್ಲಾ ಒಡೆದು, ಸಿಕ್ಕಿದವರನ್ನೆಲ್ಲಾ ಹೊಡೆದರು – ಶಾಸನಸಭೆ ಮುಂದುವರಿಸಲ್ಪಟ್ಟು ಶಾಸಕರೂ ಮಂತ್ರಿಗಳೂ ದಿಕ್ಕಾಪಾಲಾಗಿ ಓಡಿದರು

★

ಭಾರತದ ಗಿರಾಕಿಗಳು

ಭಾರತದ ಪದಾರ್ಥಗಳಿಗೆ ಅಮೇರಿಕಾ ಬಹು ಭಾರಿ ಗಿರಾಕಿಯಾಗಿದ್ದು 68–69 ರಲ್ಲಿ ರೂ 234.4 ಕೋಟಿಯಷ್ಟು ಆಮದು ಮಾಡಿಕೊಂಡಿದೆ ; ಬ್ರಿಟ್ ರೂ 201.5 ಕೋಟಿಗಳಷ್ಟು, ಜರ್ಮನಿ 158.3 ಕೋಟಿಗಳಷ್ಟು, ರಷ್ಯಾ 148.3 ಕೋಟಿಗಳಷ್ಟು ಆಮದು ಮಾಡಿಕೊಂಡಿದೆ

ಬಸ್ ದರ ಏರಿಕೆ ಪ್ರತಿಭಟನೆ

ಒರಿಸ್ಸಾದಲ್ಲಿ ಪ್ರಯಾಣೀಕರ ಬಸ್ ದರವನ್ನು ಶೇಕಡ 15 ಹೆಚ್ಚಿಸಿದ್ದನ್ನು ಪ್ರತಿಭಟಿಸಿ ಒರಿಸ್ಸಾ ಪಿಎಸ್ಪಿ ಶಾಖೆ ಬುಧವಾರ ರಾಜ್ಯಾದ್ಯಂತ ಏರ್ಪಡಿಸಿದ್ದ ಸತ್ಯಾಗ್ರಹದಲ್ಲಿ 3 ಮಂದಿ ಶಾಸಕರು ಮತ್ತು ಅನೇಕ ಮಂದಿ ಕಾರ್ಯಕರ್ತರೂ ದಸ್ತಗಿರಿ ಮಾಡಲ್ಪಟ್ಟರು.

★

ಔಷಧಿ ದುಷ್ಪರಿಣಾಮಕ್ಕೆ ಪರಿಹಾರ

ತಮ್ಮ ತಾಯಂದಿರು ಗರ್ಭಿಣಿಯಾಗಿದ್ದಾಗ ಥಾಲಿಮೆಡೈಡ್ ಸೇವಿಸಿದ ಪರಿಣಾಮವಾಗಿ ಕೈಕಾಲಿಲ್ಲದೆ ಹುಟ್ಟಿದ 8 ವರ್ಷದ ಡೇವಿಡ್ಡಿಗೆ ರೂ 374400 ಮತ್ತು ಕಾಲಿಲ್ಲದೆ ಹುಟ್ಟಿದ 7 ವರ್ಷದ ರಿಚ್ಚರ್ಡ್‌ಗೆ ರೂ 230400 ಪರಿಹಾರವನ್ನು ಹೈಕೋರ್ಟು ಆಜ್ಞೆ ಮಾಡಿತು – ಕೋರ್ಟು ಹೊರಗೆ ಪೋಷಕರಿಗೂ ಕಂಪೆನಿಗೂ ಒಪ್ಪಂದವಾಯಿತು.

●

ಈ ಮಜಾ ನೋಡಿ

ಸಿಡ್ನಿ— ಆಸ್ಟ್ರೇಲಿಯಾದ ದೊಡ್ಡ ನಗರಗಳಲ್ಲಿ ರಾತ್ರಿ ಕೂಟಗಳಲ್ಲಿ ನಾಲ್ಕಾರು ಜೋಡಿ ದಂಪತಿಗಳು ಕಲೆತು, ಆಹಾರ-ವಿಹಾರ, ಅಮಲೌದ-ಪ್ರಮೋದಗಳ ಜೊತೆಗೆ ಗಂಡ-ಹೆಂಡತಿಯರ ವಿನಿಮಯವನ್ನು ನಡೆಸುವುದೂ ಕಂಡುಬಂದಿದೆ !

★

4 ಭಾಷೆಗಳಲ್ಲಿ

ಹೈದರಾಬಾದು— ಇಲ್ಲಿಯ ಮುನಿಸಿಪಲ್ ಕಾರ್ಪೋರೇಷನ್ ತನ್ನ ಎಲ್ಲಾ ಶಾಸನಗಳು, ನಿಬಂಧನೆಗಳು ಮತ್ತು ಫಾರಂಗಳನ್ನು ಇನ್ನು ಮುಂದೆ ತೆಲುಗು, ಉರ್ದು, ಹಿಂದಿ, ಇಂಗ್ಲೀಷು ಭಾಷೆಗಳಲ್ಲಿ ಪ್ರಕಟಿಸಲು ನಿರ್ಧರಿಸಿದೆ.

ಡಿಪಾಜಿಟರುಗಳ ಮನವಿ

ನವದೆಹಲಿ— ಬ್ಯಾಂಕು ರಾಷ್ಟ್ರೀಕರಣ ಮಸೂದೆಯನ್ನು ಮುಂದುವರಿಸಬಾರದೆಂದು 1920 ಡಿಪಾಜಿಟರ ರುಜುವಿನ ಅರ್ಜಿಯನ್ನು ಸ್ವತಂತ್ರ ಪಕ್ಷದ ಶ್ರೀ ಪಟೋಡಿಯವರು ಲೋಕಸಭೆಗೆ ಕೊಟ್ಟರು.

★

ಪ್ರಧಾನಿಗಳ ಕಛೇರಿ ಖರ್ಚು

ನವದೆಹಲಿ— 48–49 ರಲ್ಲಿ ಪ್ರಧಾನಿಗಳ ಕಛೇರಿ ಖರ್ಚು ರೂ 154367 ಇದ್ದದ್ದು 68–69 ರಲ್ಲಿ ರೂ 1375759 ಆಗಿರುವುದು ರಾಜ್ಯಸಭೆಯಲ್ಲಿ ತಿಳಿಸಲಾಯಿತು – ಕಚೇರಿ ಸಿಬ್ಬಂದಿ ವಿವರವೂ ತಿಳಿಸಲಾಯಿತು.

○

ಮುಖ್ಯ ಮಂತ್ರಿಗಳಿಗೆ ಸುಸ್ವಾಗತ

ಬಿಜಾಪುರ— ಮುಖ್ಯ ಮಂತ್ರಿಗಳಾದ ನಂ ಇಲ್ಲಿಗೆ ಪ್ರಪ್ರಥಮವಾಗಿ ಆಗಮಿಸಿದ ಶ್ರೀ ವೀರೇಂದ್ರ ಪಾಟೀಲರಿಗೆ ಗುರುವಾರ ಸುಸ್ವಾಗತ ನೀಡಲಾಯಿತು : ಸ್ವಾಗತ ಸಮಿತಿ ಅಧ್ಯಕ್ಷರು ಹಾರಹಾಕಿದನಂತರ ತೆರೆದ ಜೀಪಿನಲ್ಲಿ ಮೆರವಣಿಗೆ ನಡೆಯಿತು ; ಅವರ ಜೊತೆಯಲ್ಲಿ ಮಂತ್ರಿಗಳಾದ ಶ್ರೀ ಬಿ ಎಂ ಪಾಟೀಲರು ಮತ್ತು ಶ್ರೀ ನಾಡಗೌಡರೂ ಇದ್ದರು : ನಂತರ ಬಂಥನಾಳ್ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

★

ವಿದ್ಯಾರ್ಥಿಗಳ ಪ್ರದರ್ಶನ

ಅಹಮದಾಬಾದು— ವಾಪಿಯಲ್ಲಿ ಶ್ರೀ ಮೊರಾರ್ಜಿ ದೇಸಾಯರ ಪ್ರದರ್ಶನ ನಡೆಸಿದ ವಿದ್ಯಾರ್ಥಿ ಗುಂಪನ್ನು ಚದುರಿಸಲು ಪೋಲೀಸರು ಗಾಳಿಯಲ್ಲಿ ಗುಂಡುಹಾರಿಸಿದರು – ವಾಪಿ ಬಂದ್ ಏರ್ಪಡಿಸಿದ್ದ ವಿದ್ಯಾರ್ಥಿಗಳು ಪ್ರಧಾನಿ ಇಂದಿರಾರವರ ಪ್ರತಿರೂಪವನ್ನು ಮೆರವಣಿಗೆ ಮಾಡಿ ಸುಟ್ಟರು.

★

ಆಚಾರ್ಯರ ಹೃದಯವಂತಿಕೆ

['ಲೇಖನ ಕಾನೇರಿ" ಯಿಂದ]

(ಮುಂದುವರಿದುದು)

ಜೀವನ್ಮುಕ್ತಿಯನ್ನು ಕರುಣಿಸುವಂತಹ ವೈಷ್ಣವರ ಮೂಲ ಮಂತ್ರದ ಉಪದೇಶವನ್ನು ಪಡೆಯಲು, ಸನ್ಯಾಸಿಯಾಗಿದ್ದ ರಾಮಾನುಜರು ತಿರುಕ್ಕೋಟಿಯೂರ್ ನಂಬಿ ಎಂಬ ಘನ ವಿದ್ವಾಂಸರ ಬಳಿಗೆ ಹೋದರು. ಅವರಲ್ಲಿ ಅತ್ಯಂತ ದೈನ್ಯದಿಂದ ಮಂತ್ರೋಪದೇಶ ಮಾಡುವಂತೆ ಬೇಡಿದರು. ಅವರು ರಾಮಾನುಜರನ್ನು ನಾನಾ ರೀತಿಯಲ್ಲಿ ಭಂಗಿಸಿದರು ; ಈಗ ಬಾ, ಆಗ ಬಾ, ಎಂದು ಹೇಳುತ್ತಾ 17 ಸಾರಿ ಓಡಾಡಿಸಿದರು. ಕಟ್ಟಕಡೆಗೆ ರಾಮಾನುಜರ ಶ್ರದ್ಧೆ ಮತ್ತು ಪ್ರಾಮಾಣೀಕತೆಯಲ್ಲಿ ನಂಬಿಕೆ ಹುಟ್ಟಿ, ತಿರುಕ್ಕೋಟಿಯೂರ್ ನಂಬಿಯವರು ಅವರನ್ನು ಮಂತ್ರದೀಕ್ಷೆ ಪಡೆಯಲು ಮತ್ತೊಮ್ಮೆ ಬರುವಂತೆ ಆಜ್ಞಾಪಿಸಿದರು. ಈ ಬಾರಿ ಬಹುದಿನಗಳಿಂದ ನಿರೀಕ್ಷಿಸಿದ್ದ ಆ ಘಟನೆ ನಡೆಯಿತು. ರಾಮಾನುಜರ ಬಗ್ಗೆ ಕರುಣೆತಾಳಿದ್ದ ಗುರುಗಳ ಮಂತ್ರೋಪದೇಶ ವ್ಯಾಡಲು ಸಿದ್ಧರಾದರು. ಆದರೆ ಉಪದೇಶಿಸುವ ಮುನ್ನ ಅವರು "ನೋಡು, ಇದು ಅತ್ಯಂತ ಪವಿತ್ರ ಮಂತ್ರ. ಇದನ್ನು ಎಲ್ಲರಿಗೂ ತಿಳಿಸಕೂಡದು ನಿನ್ನ ಜೀವಿತಕಾಲದಲ್ಲಿ ನಿನ್ನ ಶಿಷ್ಯರಲ್ಲಿ ಪರೀಕ್ಷೆ ಮಾಡಿ ಒಬ್ಬನಿಗೆ ಅಥವಾ ಹೆಚ್ಚೆಂದರೆ ಇಬ್ಬರಿಗೆ ಮಾತ್ರ ಈ ಮಂತ್ರವನ್ನು ಉಪದೇಶಮಾಡು ; ಹೀಗಲ್ಲದೆ ಬೇರೆ ರೀತಿಯಲ್ಲಿ ವರ್ತಿಸಿದೆಯಾದರೆ, ಗುರುವಿಗೆ ಅವಿಧೇಯನಾಗಿ ನಡೆದ ಪಾಪ ನಿನಗೆ ತಟ್ಟುತ್ತದೆ" ಎಂದು ಎಚ್ಚರಿಸಿದರು. ರಾಮಾನುಜರು ಸಮ್ಮತಿಸಿದರು : ಮಂತ್ರೋಪದೇಶವಾಯಿತು : ರಾಮಾನುಜರು ಗುರುಗಳಿಗೆ ಗೌರವ ಸಲ್ಲಿಸಿ ತೆರಳಿದರು.

ಪರರು ತಮ್ಮ ಅಜ್ಞಾನದಿಂದಾಗಿ ಜೀವನದಲ್ಲಿ ಎದುರಿಸಬೇಕಾದ ಕಷ್ಟಪರಂಪರೆಗಳನ್ನು ನೆನೆದು ರಾಮಾನುಜರ ಹೃದಯ ಯಾತನೆಯಿಂದ ಮಿಡಿಯಿತು. "ಈ ಮಂತ್ರ ಸಿದ್ಧಿಯಿಂದ ಕೈವಲ್ಯ ಲಾಭ ಸುಲಭವೆಂದಮೇಲೆ ನಾನು ಇದನ್ನು, ಎಲ್ಲರಿಗೂ ಹೇಳಿ ಏಕೆ ಸಹಾಯ ಮಾಡಬಾರದು" ಎಂದು ಮನದಲ್ಲೇ ಯೋಚಿಸಿದರು. ಹಾಗೆ ನಿಶ್ಚಯಿಸಿಕೊಂಡ ಕೂಡಲೇ ವೇಗವಾಗಿ ನಡೆದು ದೇವಾಲಯಕ್ಕೆ ಹೋಗಿ ಅದರ ಗೋಪುರವನ್ನು ಏರಿ, ಅಲ್ಲಿದ್ದ ನಗಾರಿಯನ್ನು ಬಾರಿಸತೊಡಗಿದರು.

Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಿ

ಗೋರಕ್ಷಣೆಗೆ ಬೆಂಬಲ ನೀಡಿ

SHAKTI SUDHA

A Superb Tonic

ವುಡ್‌ಲಾಂಡ್ಸ್ ಜಯಸ್ಮದ 2ನೇ ವಾರ

ಅಮೋಘ ಆರಂಭ

— ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಇಂತಕಾಮ್ INTAQAM

ಪಾತ್ರ– ಸಂಜಯ್, ಸಾಧನ, ರಾಜೇಂದ್ರನಾಥ್, ಹೆರ್ಲ

ರಹೆಮ್, ಅಶೋಕುಮಾರ್

ಸಂಗೀತ : ಲಕ್ಷ್ಮೀಕಾಂತ್ – ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಒಪೆರಾ__ ಅಮೋಘ 4ನೇ ವಾರ

ಅಮೋಘ ಆಕರ್ಷಣೆಯ ಕನ್ನಡ ಚಿತ್ರ — ಕಥೆ-ಸಂಭಾಷಣೆ : ಶ. ರಾ. ಸು.

ಪುನರ್ಜನ್ಮ

ನಟವರ್ಗ— ರಾಜಕುಮಾರ್, ಬಾಲಕೃಷ್ಣ, ಜಯಂತಿ, ಚಂದ್ರಕಲಾ

ಜಯಶ್ರೀ, ರಮಾ, ರಂಗ, ಸತ್ಯ

ದಿನ 3 ಆಟಗಳು

Golden Jubilee of 'Satyavadi'

The golden jubilee of the 'Satyavadi' is to be celebrat very-soon

The President, the Prime Minister, H H. the Maharaja Mysore, and other personages have extended messages of felicitations and good wishes. Sri Sringeri and Sri Dwarak Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah Sri Madhav Shenoi. Sri Opera Talkies. Padmabhushana Dr. M.C. Modi, Dr. R. S. Nanjunda Swamy (Glasgow). Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4